# 16 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ ಬೆಂಗಳೂರು ನಗರ

ಪ್ರಮಾಣ ಮಾಡಿಸಿದ ದಿನಾಂಕಃ 04.12.2019

| | |
|---|---|
| ಸಾಕ್ಷಿದಾರರ ಹೆಸರು | ರಂಗನಾಥ್ .ಟಿ.ಜಿ |
| ತಂದೆಯ ಹೆಸರು | ಲೇಟ್. ಗೋವಿಂದ್‌ರಾಜ್ ಅಯ್ಯಂಗಾರ್ |
| ವಯಸ್ಸು | 63 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸ ಸ್ಥಳ | ನಂ.523, ಓಂ ಸಾಯಿರಾಂ, 3ನೇ ಮೇನ್, ಬಿಎಸ್‌ಕೆ 3ನೇ ಹಂತ, 2ನೇ ಫೇಸ್, ಬೆಂಗಳೂರು-85. |

ಮುಖ್ಯ ವಿಚಾರಣೆಃ ಶ್ರೀ ಆರೋಪಿ ಪರ ವಕೀಲರಿಂದಃ

ಪಿರ್ಯಾದಿದಾರರು ನನ್ನ ಸಂಬಂಧಿಕರಿರುತ್ತಾರೆ. ಪಿರ್ಯಾದಿದಾರರಿಂದ ನಾನು ಯಾವುದೇ ಹಣ ತೆಗೆದುಕೊಂಡಿರುವುದಿಲ್ಲ. ನಾನು ಡೈಯಾಬಿಟಿಕ್ ರೈಸನ್ನು ತಯಾರಿಸುತ್ತಿದ್ದೆನು. ಆ ಸಂದರ್ಭದಲ್ಲಿ ಪಿರ್ಯಾದಿದಾರರು ನನಗೆ ಭತ್ತ ಖರೀದಿಸುವಲ್ಲಿ ಸಹಾಯ ಮಾಡುತ್ತಿದ್ದರು ಆ ಸಂದರ್ಭದಲ್ಲಿ ನಾನು ಪಿರ್ಯಾದಿದಾರರಿಗೆ ಹಲವಾರು ಬಾರಿ ಚೆಕ್ಕುಗಳನ್ನು ಕೊಡುತ್ತಿದ್ದೆನು. ಆ ನಂತರ ನನಗೂ ಮತ್ತು ಪಿರ್ಯಾದಿದಾರರಿಗೂ ಮನಸ್ತಾಪ ಉಂಟಾಗಿದ್ದು ಹಾಗಾಗಿ ಪಿರ್ಯಾದಿದಾರರು ವಿವಾದಿತ ಚೆಕ್ಕನ್ನು ಬರೆದುಕೊಂಡು ಹಾಜರುಪಡಿಸಿರುತ್ತಾರೆ. ವಿವಾದಿತ ಚೆಕ್ಕನ್ನು ನಾನು ಬರೆದಿರುವುದಿಲ್ಲ ಮತ್ತು ಪಿರ್ಯಾದಿದಾರರಿಗೆ ಕೊಟ್ಟಿರುವುದಿಲ್ಲ. ವಿವಾದಿತ ಚೆಕ್ ಪಿರ್ಯಾದಿದಾರರ ಬಳಿ ಇರುವುದು ನನಗೆ ಗೊತ್ತಿರುವುದಿಲ್ಲ. ಈ ಕೇಸಿಗೆ ಸಂಬಂಧಿಸಿಂದತೆ ನೋಟಿಸ್ ಬಂದಿರುವುದಿಲ್ಲ ಕೋರ್ಟಿನಿಂದ ಸಮನ್ಸ್ ಬಂದಿರುವುದಿಲ್ಲ. ವಾರೆಂಟ್ ಬಂದ ನಂತರ ನಾನು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ನಾನು

ಪಿರ್ಯಾದಿದಾರರಿಗೆ ನಾನು ಯಾವುದೇ ಕೊಡುವುದು ಬರುವುದಿಲ್ಲ. ಈ ಕೇಸಿನಲ್ಲಿ ನನ್ನನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟಿ ಸವಾಲು ಃ ಪಿರ್ಯಾದಿದಾರರು ಪರ ವಕೀಲರು ಗೈರು ಹಾಜರಿರುವುದರಿಂದ ಪಾಟಿ ಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

16ನೇ ಅಪರ ಮು ಮ ದಂ ಬೆಂ ನಗರ